೩. ಗಮನ ಸೆಳೆಯುವ ಸೂಚನೆ

ವಿಷಯ :ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನಾ ಕಾರ್ಯಕ್ರಮಕ್ಕೆ ಹಣ ಬಿಡುಗಡೆಯಾಗದಿರುವುದರಿಂದ ತುಮಕೂರು ಜಿಲ್ಲೆಯ ನೇಕಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ.

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) : ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನಾ ಕಾರ್ಯಕ್ರಮಕ್ಕೆ ಹಣ ಬಿಡುಗಡೆಯಾಗದಿರುವುದರಿಂದ ತುಮಕೂರು ಜಿಲ್ಲೆಯ ನೇಕಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಜವ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ವಿಷಯ : ತುಮಕೂರು ಶ್ರೀ ಅಪ್ಪು ಪಟ್ಟಣ ಶೆಟ್ಟಿ (ಜವಳಿ ಸಚಿವರು) : ವಸತಿ ಕಾರ್ಯಾಗಾರ ಯೋಜನೆಯು ಕೆಳಕಂಡ ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

೧. ಈ ಯೋನೆಯಡಿ ಸೌಲಭ್ಯ ಪಡೆಯುವ ಫಲಾನುಭವಿಯು ವಸತಿ ರಹಿತರಾಗಿರಬೇಕು.

೨. ನಿವೇಶನದ ದಾಖಲಾತಿಗಳು ಪತಿ–ಪತ್ನಿಯ ಹೆಸರಿನಲ್ಲಿ ಜಂಟಿ ಖಾತೆ ಹೊಂದಿರಬೇಕು.

೩. ನೇಯ್ಗೆ ವೃತ್ತಿಯಿಂದ ಕನಿಷ್ಠ ಶೇಕಡ ೫೦ ರಷ್ಟು ವಾರ್ಷಿಕ ವರಮಾನವನ್ನು ಹೊಂದಿರಬೇಕು ಮತ್ತು ಕೈಮಗ್ಗ ನೇಕಾರರ ಸಹಕಾರ ಸಂಘದ ಸದಸ್ಯರಾಗಿರಬೇಕು.

೪. ಸರ್ಕಾರದ ಇತರೆ ಯಾವುದೇ ಯೋಜನೆಯಡಿ ಇದೇ ತೆರನಾದ ಸೌಲಭ್ಯವನ್ನು ಪಡೆದಿರಬಾರದು.

೫. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಯೋಜನಾ ಘಟದ ವೆಚ್ಚದ ವಿವರಗಳು ಈ ಕೆಳಕಂಡಂತಿದೆ.

ಕ್ರ.ಸಂ	ವಸತಿ ಸಹಿತ ಕಾರ್ಯಾಗಾರ	ಒಟ್ಟು ಘಟಕ ವೆಚ್ಚ	ಬ್ಯಾಂಕ್ / ಹಣಕಾಸು ಸಂಸ್ಥೆಗಳ ಸಾಲ	ಸಹಾಯಧನ	ಫಲಾನುಭವಿಯ ಪಾಲು
(I) ೧	ಗ್ರಾಮೀಣ ಪ್ರದೇಶ	೩೫,೦೦೦	೧೪,೦೦೦	೧೮,೦೦೦	೩,೦೦೦
೨	ನಗರ ಪ್ರದೇಶ	೪೫,೦೦೦	೨೦,೦೦೦	೨೦,೦೦೦	೫,೦೦೦
(II) ೧	ಮನೆಗೆ ಹೊಂದಿಕೊಂಡಂತೆ ಕಾರ್ಯಾಗಾರ ಗ್ರಾಮೀಣ ಪ್ರದೇಶ	೯,೦೦೦	–	೭,೦೦೦	೨,೦೦೦
೨	ನಗರ ಪ್ರದೇಶ	೧೪,೦೦೦	–	೧೦,೦೦೦	೪,೦೦೦

ಈ ಯೋಜನೆಯಡಿ ವಸತಿ ಕಾರ್ಯಾಗಾರ ಮಂಜೂರಾತಿ ಕೋರಿ ಕೇಂದ್ರ ಸರ್ಕಾರಕ್ಕೆ ಅರ್ಹ ಪ್ರಸ್ತಾವನೆಗಳನ್ನು ಶಿಫಾರಸ್ಸು ಮಾಡಲಾಗಿದ್ದು ಕೇಂದ್ರ ಸರ್ಕಾರದಿಂದ ಈ ಕೆಳಕಂಡಂತೆ ಹಣ ಬಿಡುತಗಡೆಯಾಗಿರುತ್ತದೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ	ವರ್ಷ	ಕೇಂದ್ರ ಸರ್ಕಾರದಿಂದ ಮಂಜೂರಾದ ಘಟಕಗಳು			ಬಿಡುಗಡೆಯಾದ ಸಹಾಧನ	ಸಾಧನೆ	
		ವಸತಿ ಕಾರ್ಯಾಗಾರ	ಕಾರ್ಯಾಗಾರ	ಸಹಾಯಧನ		ಭೌತಿಕ	ಆರ್ಥಿಕ
೧	೨೦೦೨-೦೩ ೨೦೦೩-೦೪	೩೪೫೫೩	೫೦೦೬	೯೪೪.೫೬	೪೯೨.೨೮	೩೧೯೬	೪೯೨.೨೮
೨	೨೦೦೪-೦೫	೩೦೭೦	೪೫೫	೫೬೪.೯೧	೨೪೨.೪೫೫	೧೫೫೯	೨೪೨.೪೫೫

	ಒಟ್ಟು	೬೫೨೩	೫೧೩೧	೧೫೪೪.೪೭	೭೭೪.೭೩೫	೪೭೩೫	೭೭೪.೭೩೫

ವಸತಿ ಸಹಿತ ಕಾರ್ಯಾಗಾರ ಯೋಜನೆಯ ಸೌಲಭ್ಯವನ್ನು ಬಹುತೇಕ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸಹ ನೀಡಲಾಗಿರುತ್ತದೆ. ನೇಕಾರರ ಸಾಂದ್ರತೆ ಹೆಚ್ಚಾಗಿರುವ ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಚಿತ್ರದುರ್ಗ, ತುಮಕೂರು, ಕೋಲಾರ, ಶಿವಮೊಗ್ಗೆ, ಮಂಡ್ಯ, ಬೀದರ್, ಹಾವೇರಿ, ಮೈಸೂರು, ಚಾಮರಾಜನಗರ, ಮೈಸೂರು, ಗದಗ್ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಆದ್ಯತೆ ನೀಡಲಾಗಿರುತ್ತದೆ. ವಸತಿ ಕಾರ್ಯಾಗಾರ ನಿರ್ಮಾಣವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಹಾಗೂ ಕಾರ್ಯಾಗಾರವನ್ನು ನೇರವಾಗಿ ಸಹಕಾರ ಸಂಘಗಳ ಮೂಲ ನಿರ್ಮಿಸಿಕೊಡಲು ಸಹಾಯಧನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) : ಉಪಾದಧ್ಯಕ್ಷರೆ, ನಮ್ಮ ಜಿಎಲಲ್ಯಲ್ಲಿರುವ ಇವರ ಇಲಾಖೆಯ ಅಧಿಕಾರಿ ಈ ಸರ್ಕಾರಕ್ಕೆ ಒಂದು ಪತ್ರವನ್ನು, ಈ ರೀತಿ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಹಣ ಬಿಡುಗಡೆಯಾಗಿಲ್ಲವೆಂದು ಬರೆದಿದ್ದಾರೆ. ಇದು ನಿಜವಿದ್ದರೆ ಸಚಿವರು ಒಪ್ಪಿಕೊಂಡು ಆ ಕಾರ್ಯಕ್ರಮಕ್ಕೆ ಆ ಪತ್ರದನ್ವಯ ಹಣ ಬಿಡುಗಡೆ ಮಾಡಿದ್ದಾರಾ ಇಲ್ಲವಾ ಎನ್ನುವುದನ್ನು ಹೇಳಬೇಕು. ಹಾಗೆಯೆ, ಇವರು ೨೦೦೪-೦೫ ರವರೆಗೆ ಮಾಹಿತಯನು ಕೊಟ್ಟಿದ್ದಾರೆ. ೨೦೦೫-೦೬, ೨೦೦೬-೦೭ ರಲ್ಲಿ ಏನೇನು ಮಾಡಿದ್ದಾರೆ ಎಂಬುದನ್ನು ಹೇಳಿ. ಇವರಿಗೆ ಕೇಂದ್ರದಿಂದ ಹಣ ಬರಬೇಕಾದರೆ, ಇವರು ಮೊದಲು ಕೇಂದ್ರದಿಂದ ಬಿಡುಗಡೆಯಾದ ಹಣಕ್ಕೆ utilization certificate ಕಳುಹಿಸಿದರೆ ಮತ್ತೆ ಹಣ ಬಿಡುಗಡೆಯಾಗುವುದಕ್ಕೆ ವಿಳಂಬವಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತವಾದ ಸೂಚನೆಯನ್ನು ಕೊಟ್ಟು ಈ ಒಂದು ನೇಕಾರರಿಗೆ ವಸತಿ ಯೋಜನೆಯಡಿಯಲ್ಲಿ ಬರುವ ಹಣ ಸಕಾಲದಲ್ಲಿ ದೊರಕಿ ಅವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರ ಕ್ರಮವಹಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಅಪ್ಪು ಪಟ್ಟಣ ಶೆಟ್ಟಿ : ಉಪಾಧ್ಯಕ್ಷರೆ, ಕೊಟ್ಟಂತಹ ಮಾಹಿತಿಯಲ್ಲಿ, ಜಿಲ್ಲೆಗೆ ಬರುವ ಬಾಕಿ ಏನು ಹಣವಿದೆ, ಕೇಂದ್ರ ಸರ್ಕಾರದ ಪತ್ರದ ದಿನಾಂಕ ೩ ರ ೨೦೦೭ರಲ್ಲಿ ವಸತಿ ಕಾರ್ಯಯೋಜನೆಯಡಿಯಲ್ಲಿ – ೨೦೦೨–೦೩ನೇ ಸಾಲಿನ ಅನುಮೋದಿತ ಪ್ರಸ್ತಾವನೆಯಂತೆ ಮೂರನೇ ಕಂತಿನ ಹಣವಾದ ೩೭.೫೭ಲಕ್ಷ ಇಡೀ ರಾಜ್ಯಕ್ಕೆ ಬಿಡುಗಡೆಯಾಗಿದ್ದು ದಿನಾಂಕ ೨೦.೨.೨೦೦೭ ರಂದು ಸದರಿ ಹಣವು ರಾಜ್ಯಕ್ಕೆ ಜಮೆಯಾಗಿರುತ್ತದೆ. ಈ ಪೈಕಿ ಕೆಳಕಂಡಂತೆ ೪೮.೩೫ ಲಕ್ಷ ರೂಪಾಯಿಗಳನ್ನು ತುಮಕೂರು ಜಿಲ್ಲೆಗೆ ಬಿಡುಗಡೆ ಮಾಡಲಾಗಿರುತ್ತದೆ. ರಾಜ್ಯದ ಬಿಡುಗಡೆಯಾದ ಹಣ ಶೇ ೨೦ ರಷ್ಟಾಗಿರುತ್ತದೆಂದು ನಾನು ಹಿರಿಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಈ ಬಗ್ಗೆ ತಮಗೆ ಪತ್ರ ಬಂದಿದೆ. ಆ ಬಗ್ಗೆ ಪರಿಶೀಲನೆ ಮಾಡಿ, ಯಾವುದೇ ತಪ್ಪಾಗಿದ್ದರೆ ಅಥವಾ ಸರಿಪಡಿಸುವುದಿದ್ದರೆ ಸರಿಪಡಿಸತುತ್ತೇನೆಂದು ಹೇಳಬಯಸುತ್ತೇನೆ.

ಆ) ವಿಷಯ : ಶ್ರೀ ಸಿದ್ದೇಶ್ವ ಸಹಕಾರ ಬ್ಯಾಂಕ್ ನಿಯಮಿತ, ಬಿಜಾಪುರ, ಇದರಲ್ಲಿನ ನ್ಯೂನತೆಗಳ ಬಗ್ಗೆ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ೧೯೫೯ರ ಪ್ರಕರಣ ೫೦(೧) ರನ್ವಯ ಕ್ರಮಜರುಗಿಸುವ ಬಗ್ಗೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳ) : ಶ್ರೀ ಸಿದ್ದೇಶ್ವರ ಸಹಕಾರ ಬ್ಯಾಂಕ್ ನಿಯಮಿತ, ಬಿಜಾಪುರ, ಇದರಲ್ಲಿನ ನ್ಯೂನತೆಗಳ ಬಗ್ಗೆ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ೧೯೫೯ರ ಪ್ರಕರಣ ೫೦(೧) ರನ್ವಯ ಕ್ರಮಜರುಗಿಸುವ ಬಗ್ಗೆ ಮಾನ್ಯ ಸಹಕಾರಿ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಜಿ.ಟಿ.ದೇವೇಗೌಡ (ಸಹಕಾರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ,

* ಶ್ರೀ ಸಿದದೇಶ್ವರ ಸಹಕಾಖ ಬ್ಯಾಂಕ್ ನಿ. ಬಿಜಾಪುರ ಇದರ ವ್ಯವಹಾಖಗಳ ಕುರಿತು ೧೭ ಆರೋಪಗಳ ಮೇಲೆ ಆಡಳಿತ